(ಈ) ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆಗಳು ಎಷ್ಟು;

(ಉ) ಗಣಿಗಾರಿಕೆಗಳಿಂದ ವನ್ಯ ಮೃಗಗಳಿಗೆ ಅಪಾಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಗಣಿಗಾರಿಕೆಗಳ ದಾಂದಲೆಯಿಂದ ಆನೆಗಳು ಸೇರಿದಂತೆ ಅನೇಕ ಪ್ರಾಣಿಗಳು ಕಾಡನ್ನು ಬಿಟ್ಟು ನಾಡಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಋ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ. ಚನ್ನಿಗಪ್ಪ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

(ಅ) ರಾಜ್ಯದಲ್ಲಿ ಇರುವ ಒಟ್ಟು ಅರಣ್ಯ ಪ್ರದೇಶ 43,35,639 ಹೆಕ್ಟೇರ್‌ಗಳು

(ಆ) ಬಳ್ಳಾರಿ, ಹೊಸಪೇಟೆ, ಸಂಡೂರು, ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ, ದಾವಣಗೆರೆ, ಉಡುಪಿ, ಶಿವಮೊಗ್ಗ, ಬೆಳಗಾವಿ, ಬಾಗಲಕೋಟೆ, ಸಾಗರ, ತುಮಕೂರು ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲಾಗುತ್ತಿದೆ.

(ಇ) ಕಬ್ಬಿಣದ ಅದಿರು ಮ್ಯಾಗನೀಸ್, ಲೈಮ್ ಸ್ಟೋನ್, ಸಿಲಿಕ, ಕ್ವಾರ್ಟ್ಜ್ ರೀತಿಯ ಖನಿಜಗಳನ್ನು ಗಣಿಯಿಂದ ತೆಗೆಯಲಾಗುತ್ತಿದೆ.

(ಈ) ಯಾವುದೇ ಅಕ್ರಮ ಗಣಿಗಾರಿಕೆಗಳು ನಡೆಯುತ್ತಿಲ್ಲ

(ಉ) ಗಣಿಗಾರಿಕೆಗಳಿಂದ ವನ್ಯ ಮೃಗಗಳಿಗೆ ಅಪಾಯವಾಗಿರುವ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.

(ಊ) ಇಂತಹ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ

(ಋ) ಉದ್ಭವಿಸುವುದಿಲ್ಲ

ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಘೋಷಿಸುವುದು

254. **ಶ್ರೀ ಸುರೇಶ್ ಎಸ್. ಮಾರೀಹಾಳ (ಕಿತ್ತೂರು):–** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಿತ್ತೂರಿನಲ್ಲಿ ವಿಶೇಷ ತಹಶೀಲ್ದಾರರ ಕಛೇರಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಹಾಗಿದ್ದಲ್ಲಿ, ಯಾವಾಗ ಈ ಘೋಷಣೆಯನ್ನು ಮಾಡಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):-

(ಅ) ಕಿತ್ತೂರಿನಲ್ಲಿ ವಿಶೇಷ ತಹಶೀಲ್ದಾರರ ಕಛೇರಿ ಕಾರ್ಯ ನಿರ್ವಹಿಸುತ್ತಿದೆ

(ಆ) ಇಲ್ಲ

(ಇ) ಇತರ ತಾಲ್ಲೂಕುಗಳ ಪುನರ್ ರಚನೆ ಪ್ರಸ್ತಾವನೆಗಳ ಜೊತೆಗೆ ಇದನ್ನೂ ಪರಿಶೀಲಿಸಲಾಗುವುದು.

849. **ಶ್ರೀ ಬಾಲರಾಜ್ ಎಸ್.** :- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೊಳ್ಳೇಗಾಲ ಕ್ಷೇತ್ರದಲ್ಲಿ ಗ್ರಾನೈಟ್ ಪಾರ್ಕ್ ನಿರ್ಮಿಸಿ ಕೊಡುವಂತೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಗ್ರಾನೈಟ್ ಪಾರ್ಕ್ ನಿರ್ಮಿಸುವ ಕಾರ್ಯ ಯಾವ ಹಂತದಲ್ಲಿದೆ;

(ಇ) ಅದನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ;

(ಈ) ಹಾಗಿದ್ದಲ್ಲಿ, ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-

(ಅ) ಹೌದು

(ಆ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ (ಕೆಎಸ್ಎಸ್ಐಡಿಸಿ) ರವರು ಕೊಳ್ಳೇಗಾಲ ತಾಲ್ಲೂಕಿನಲ್ಲಿ 2ನೇ ಹಂತದ ಕೈಗಾರಿಕಾ ವಸಾಹತು ಸ್ಥಾಪನೆ ಮಾಡಿ ಅದರಲ್ಲಿ ಗ್ರಾನೈಟ್ ಪಾರ್ಕ್ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ. ಇದಕ್ಕಾಗಿ ಕೊಳ್ಳೇಗಾಲ-ಮಳವಳ್ಳಿ ಹೆದ್ದಾರಿಯಲ್ಲಿ ಕೊಳ್ಳೇಗಾಲದಿಂದ ಸುಮರು 8 ಕಿ.ಮೀ. ದೂರದಲ್ಲಿರುವ ಧನಗೆರೆ ಎಂಬ ಗ್ರಾಮದ ಪಕ್ಕದಲ್ಲಿ ಸುಮಾರು 40 ಎಕರೆ ಸರ್ಕಾರಿ ಜಮೀನನ್ನು ಗುರುತಿಸಲಾಗಿತ್ತು. ಸದರಿ ಜಾಗವು ಕೊಳ್ಳೇಗಾಲದಿಂದ ದೂರವಾಗಿರುವುದರಿಂದ ಹತ್ತಿರವಿರುವ ಸೂಕ್ತ ಸರ್ಕಾರಿ/ಖಾಸಗಿ ಜಮೀನುಗಳ ಲಭ್ಯತೆ ಬಗ್ಗೆ ಸರ್ವೇಕ್ಷಣೆ ನಡೆಸಲಾಗುತ್ತಿದೆ.

(ಇ) ಇದೆ

(ಈ) ಗ್ರಾನೈಟ್ ಪಾರ್ಕ್ ನಿರ್ಮಿಸಲು ಬೇಕಾಗುವ ಸೂಕ್ತ ಸರ್ಕಾರಿ/ಖಾಸಗಿ ಜಮೀನು ದೊರೆತ ಕೂಡಲೇ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಿ ಗ್ರಾನೈಟ್ ಪಾರ್ಕ್ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು.